ಶ್ರೀ ಎಸ್.ಎಂ. ಕೃಷ್ಣ : ನೋಡೋಣ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ, ಆರು ತಿಂಗಳಿಂದ ನಾವು ಕೆಲಸವನ್ನು ಸ್ಪೀಡ್‌ಅಪ್ ಮಾಡಿದ್ದೇವೆ ಎಂದು ಹೇಳಿದರು. ಆದರೆ, ಆರು ತಿಂಗಳ ಹಿಂದೆ ನಡೆದಿರುವ ಕಾಮಗಾರಿಗಳು ಸರಿಯಿಲ್ಲ, ಅದರಲ್ಲಿ ಅವ್ಯವಹಾರಗಳಾಗಿವೆ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದಾರೆ, ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ, ಇದರ ಬಗ್ಗೆ ಒಂದು ಸಮಗ್ರವಾದಂಥ ತನಿಖೆಯಾದರೆ ಒಳ್ಳೆಯದು. ಆರು ತಿಂಗಳ ಹಿಂದೆಯಾದದ್ದಾರೂ ಸರಿ, ಜನಗಳ ದುಡ್ಡು ಅಕ್ರಮ ಮಾಡಿರುವುದರ ಬಗ್ಗೆ ಒಂದು ತನಿಖೆಯನ್ನು ಮಾಡಿ. ಯಾವ ಮಟ್ಟದ ತನಿಖೆ ಮಾಡಿದರೂ ನಾವು ಸಿದ್ದರಿದ್ದೇವೆ, ಇದೇ ಮಟ್ಟದ ತನಿಖೆಯಾಗಬೇಕು ಎಂದು ಕೇಳುವುದಿಲ್ಲ. ಒಟ್ಟಿನಲ್ಲಿ ಅವ್ಯವಹಾರ ನಡೆದಿರುವುದು ಬೆಳಕಿಗೆ ಬರಬೇಕು. ಎಲ್ಲಾ ಪತ್ರಿಕೆಗಳ ಸಂಪಾದಕೀಯದಲ್ಲಿ ಬರೆದಿದ್ದಾರೆ. ಅದಕ್ಕೋಸ್ಕರ , ದಯವಿಟ್ಟು ಆರು ತಿಂಗಳ ಹಿಂದೆ ಏನು ಆಗಿತ್ತು, ಅದನ್ನೇ ತನಿಖೆ ಮಾಡಿಸಿ. ಸಮಗ್ರವಾದಂಥ ಒಂದು ಚಿತ್ರಣ ಹೊರಗೆ ಬಂದರೆ ಅವ್ಯವಹಾರವಾಗಿದೆ ಎನ್ನುವುದು ತಿಳಿಯುತ್ತದೆ. ಆ ದೃಷ್ಟಿಯಿಂದ ತನಿಖೆ ಮಾಡಬೇಕು ಎಂದು ನಾನು ಮತ್ತೊಮ್ಮೆ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ.

ಅಧ್ಯಕ್ಷರು : ಹೇಳಿ ಆಯಿತಲ್ಲ, ಆಯಿತು ಬಿಡಿ. ಈಗ ಆ ವಿಷಯ ಮುಗಿಯಿತು. ಈಗ ಶಾಸನ ರಚನೆ.

5. ಶಾಸನ ರಚನೆ

ಎ) ವಿಧೇಯಕಗಳ ಮಂಡನೆ

(ಗ) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ 2000 ಮಂಡನೆ ಅನುಮತಿ ಕೋರಿಕೆ

ಶ್ರೀ ಡಿ.ಕೆ. ಶಿವಕುಮಾರ್(ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ 2000 ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ 2000 ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ 2000 ಸಭೆಯ ಮುಂದೆ ಮಂಡಿಸುತ್ತೇನೆ

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ (i)&(ii)